2. ಅರಣ್ಯ ಭೂಮಿ ಒತ್ತುವರಿ ಮಾಡಿ ಕೃಷಿ ಮಾಡುತ್ತಿರುವ ರೈತರಿಗೆ ಭೂಮಾಲೀಕತ್ವ ದಿಲ್ಲದಿರುವುದರಿಂದ ಆ ರೈತರು ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗದೇ ತೊಂದರೆಗೊಳಗಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

3. ಅರಣ್ಯ ಭೂಮಿ ಒತ್ತುವರಿ ಮಾಡಿರುವ ರೈತರಲ್ಲಿ ಬಹು ಸಂಖ್ಯಾತರು ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

4. ಈ ರೈತರಿಗೆ ಪಟ್ಟಾ ಕೊಡುವ ಕೆಲಸವನ್ನು ಕಾಲಮಿತಿಗೊಳಪಟ್ಟು ಪೂರ್ಣಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು.

1. ಅರಣ್ಯ ಭೂಮಿ ಒತ್ತುವರಿ ಮಾಡಿ ಕೃಷಿ ಮಾಡುತ್ತಿರುವ, ಕೇಂದ್ರ ಸರ್ಕಾರದಿಂದ ಅನುಮೋದನೆಗೊಳಪಟ್ಟ ಪ್ರಕರಣಗಳಿಗೆ ಸಂಬಂಧಪಟ್ಟ ಕೃಷಿಕರಿಗೆ ಪಟ್ಟ ನೀಡುವ ವಿಚಾರ ಸರ್ಕಾರದ ತೀವ್ರ ಪರಿವೀಕ್ಷಣೆಯಲ್ಲಿರುವುದು ಸರ್ಕಾರಕ್ಕೆ

2. ಹೌದು.

3. ಹೌದು.

4. ಪಟ್ಟ ಕೊಡುವ ಕೆಲಸ ಸೂಂಪೂರ್ಣಗೊಳಿಸಲು ಸಾಕಷ್ಟು ಪೂರ್ವ ತಯಾರಿ ಬೇಕಾದಿದ್ದು, ಅದಷ್ಟೆ ಬೇಗನೆ ಪೂರ್ಣಗೊಳಿಸಬೇಕೆಂದು ಸರ್ಕಾರದ ಇಚ್ಛೆಯಾಗಿದೆ.

ಜಿಲ್ಲಾ ಯೋಜನೆ ಮಂಡಳಿಗಳ ರಚನೆ

368(623) ಶ್ರೀ ಡಿ.ಆರ್. ಪಾಟೀಲ್(ಗದಗ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಪಂಚಾಯತ್‌ರಾಜ್ ಕಾನೂನಿನನ್ವಯ ಜಿಲ್ಲಾ ಯೋಜನಾ ಮಂಡಳಿಗಳ ರಚನೆಯ ಜವಾಬ್ದಾರಿ ಸರ್ಕಾರದ್ದಾಗಿದ್ದು ಜಿಲ್ಲಾ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದು ಎರಡು ವರ್ಷಗಳಾಗುತ್ತಿದ್ದರೂ ಈವರೆಗೆ ಜಿಲ್ಲಾ ಯೋಜನಾ ಮಂಡಳಿಗಳ ರಚನೆ ಮಾಡದಿರಲು ಕಾರಣಗಳೇನು;

ಆ) ಇನ್ನು ಎಷ್ಟು ಕಾಲಾವಧಿಯಲ್ಲಿ ಜಿಲ್ಲಾ ಯೋಜನಾ ಮಂಡಳಿಗಳನ್ನು ರಚಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಅ) ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಿಗೆ ಜಿಲ್ಲಾ ಯೋಜನಾ ಸಮಿತಿಗಳನ್ನು ರಚಿಸುವ ಪ್ರಕ್ರಿಯೆಯನ್ನು ಸಧ್ಯದಲ್ಲೆ ಪ್ರಾರಂಭಿಸಲಾಗುವುದು.

ರಾಜ್ಯದಲ್ಲಿರುವ ಸಂಸ್ಕೃತ ಪಾಠಶಾಲೆಗಳು

369(639) ಶ್ರೀ.ಡಿ.ಆರ್.ಪಾಟೀಲ (ಗದಗ) ಮಾನ್ಯ ಪ್ರಾಥಮಿಕ ಹಾಗೂ ಪ್ರಾಢಾಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಸಂಸ್ಕೃತ ಪಾಠಶಾಲೆಗಳ ಸಂಖ್ಯೆ ಎಷ್ಟು? ಇದರಲ್ಲಿ ಅನುದಾನಿತ ಶಾಲೆಗಳೆಷ್ಟು? ಅನುದಾನ ರಹಿತ ಶಾಲೆಗಳೆಷ್ಟು?

ಅ) ಒಟ್ಟು 348

1) ಅನುದಾನಿತ 255	2) ಅನುದಾನ ರಹಿತ 93		
ಜಿಲ್ಲೆಗಳು	ಅನುದಾನಿತ	ಅನುದಾನರಹಿತ	ಒಟ್ಟು
1) ಬೆಂಗಳೂರು	19	9	28
2) ಬೆಂಗಳೂರು ಗ್ರಾ. ಜಿಲ್ಲೆ	18	5	23
3) ತುಮಕೂರು	45	11	56
4) ಕೋಲಾರ	7	-	7
5) ಶಿವಮೊಗ್ಗ	9	-	9
6) ಚಿತ್ರದುರ್ಗ	4	6	10
7) ಮೈಸೂರು	35	15	50
8) ಮಂಡ್ಯ	2	4	6
9) ಚಿಕ್ಕಮಗಳೂರು	3	3	6
10) ದಕ್ಷಿಣ ಕನ್ನಡ	5	1	6
11) ಹಾಸನ	12	3	15
12) ಧಾರವಾಡ	29	16	45
13) ಕಾರವಾರ	19	1	20
14) ಬೆಳಗಾವಿ	8	2	10
15) ಬಿಜಾಪುರ	21	11	32

	ಉತ್ತರ			
16)	ಗುಲ್ಬರ್ಗಾ	12	5	17
17)	ಬಳ್ಳಾರಿ	5	1	6
18)	ರಾಯಚೂರು	1	-	1
19)	ಬೀದರ್	1	-	1
	ಒಟ್ಟು	255	93	348

ಅ) ಇನ್ನು ಮುಂದೆ ಪ್ರಾಂಭವಾಗುವ ಸಂಸ್ಕೃತ ಪಾಠಶಾಲೆಗಳಿಗೆ ಅನುದಾನ ನೀಡಲಾಗುವುದಿಲ್ಲವೆಂಬುದು ನಿಜವೆ?

ಇ) ಸಂಸ್ಕೃತ ನಮ್ಮ ಪುರಾತನ ಭಾಷೆ, ಭಾರತೀಯ ಸನಾತನ ಸಂಸ್ಕೃತಿಯ ಸಂಪತ್ತಿನ ಪ್ರತೀಕವಾಗಿರುವ ಸಂಸ್ಕೃತ ಭಾಷೆ ಕಲಿಕೆಗೆ ಪ್ರೋತ್ಸಾಹಿಸುವುದು ಸರ್ಕಾರದ ಹೊಣೆಯಲ್ಲಿವೆ?

ಈ) ಹಾಗಿದ್ದಲ್ಲಿ ಸಂಸ್ಕೃತ ಪಾಠಶಾಲೆಗಳಿಗೆ ಅನುದಾನ ನೀಡುವುದನ್ನು ಮುಂದುವರೆಸಲು ಸರ್ಕಾರದವರು ಅವಶ್ಯಕ ಕ್ರಮ ತೆಗೆದುಕೊಳ್ಳುವರೆ?

ಅ) ಹೌದು

ಇ) ಹೌದು

ಈ) 1987-88 ನೇ ಸಾಲಿನ ನಂತರ ಪ್ರಾಂಭವಾದ ಎಲ್ಲಾ ಶಾಲಾ ಕಾಲೇಜುಗಳು ಶಾಶ್ವತ ಅನುದಾನ ರಹಿತವಾಗುತ್ತವೆ ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಅನುದಾನ ನೀಡಲಾಗುತ್ತಿಲ್ಲ.

ಶ್ರೀ ಹೆಚ್.ಜಿ.ಗೋವಿಂದಗೌಡ

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.